# ಬುದ್ಧನೆಂಬ ಬೆಳದಿಂಗಳಿನೆಡೆಗೆ

ವೈಶಾಖ ಶುದ್ಧ ಪೂರ್ಣಿಮೆಯಂದು ಜ್ಞಾನೋದಯ ಪಡೆದ ನಂತರ ಬುದ್ಧ ತನ್ನ ಬದುಕಿನ ಧ್ಯೇಯವನ್ನು ಗುರುತಿಸಿಕೊಳ್ಳುತ್ತಾನೆ. ಈ ಸಂದರ್ಭದಲ್ಲಿಯೇ ಮೂಡಿದ ಅನುಮಾನ ಹಾಗೂ ಆ ಅನುಮಾನಕ್ಕೆ ಉತ್ತರವನ್ನು ಅವನು ಕಂಡುಕೊಳ್ಳಬೇಕಿತ್ತು. ತಾನು ಕಂಡುಕೊಂಡ ಸತ್ಯಗಳನ್ನು ಬೋಧಿಸಲು ಆರಂಭಿಸುವುದೇ ಅಥವಾ ವೈಯಕ್ತಿಕ ತ್ಯಾಗ ಭಾವನೆಯ ಪರಿಪೂರ್ಣತೆಯತ್ತ ಸಾಗುವುದೇ. ಬೋಧನೆ ಮತ್ತು ಸಾಧನೆಗಳ ನಡುವೆ ತುಡುಕಾಡಿದ ಅವನ ಮನಸ್ಸು ಆರಿಸಿಕೊಂಡಿದ್ದು ಬೋಧನೆಯನ್ನೇ.

ತಾನು ಕಂಡುಕೊಂಡ ಹೊಸ ಸಿದ್ಧಾಂತದ ಬಗ್ಗೆ, ಅದರ ಸತ್ಯಾಸತ್ಯತೆಯ ಬಗ್ಗೆ ಸಂಪೂರ್ಣ ನಂಬಿಕೆಯಿದ್ದರೂ ಜನ ಅದನ್ನು ಒಪ್ಪಿಕೊಳ್ಳುವುದು ಕಷ್ಟ. ಒಪ್ಪಿಕೊಂಡರೆ ಆಚರಣೆ ಇನ್ನೂ ಕಷ್ಟ. ದೇವರು ಮತ್ತು ಆತ್ಮಗಳೆಂಬ ಬಲಿತ ನಂಬಿಕೆಗಳಿಂದ ಜನರನ್ನು ಹೊರತರುವುದು ಕಷ್ಟದ ಕೆಲಸ. ಇದರ ಜೊತೆಯಲ್ಲಿ ಕರ್ಮಸಿದ್ಧಾಂತದ ಭದ್ರನಂಬಿಕೆಗಳನ್ನು ಹೋಗಲಾಡಿಸುವುದು ಇನ್ನೂ ಕಷ್ಟ ಸಾಧ್ಯ. ಈ ಬಿಕ್ಕಟ್ಟುಗಳನ್ನು, ಬಂಧನಗಳನ್ನು ಸಾಮಾನ್ಯ ಜನರು ಬಿಡಿಸಿಕೊಂಡು ಮುಕ್ತರಾಗುವುದೇ ನಿಜವಾದ ಬಿಡುಗಡೆ ಎಂದು ಬುದ್ಧ ನಂಬಿದ್ದ. ಈ ಕಾರಣಕ್ಕಾಗಿ ಅವನು ಆರಿಸಿಕೊಂಡಿದ್ದು ಮುಕ್ತವಾದ ಸಂವಾದ, ಸಂವಾದದ ಮುಖೇನವಾದ ಬೋಧನಾ ಮಾರ್ಗವನ್ನು.

ಬೋಧಿಸಲು ನಿರ್ಧರಿಸಿದ ನಂತರ ಯಾರಿಗೆ ಪ್ರಥಮ ಬಾರಿಗೆ ಬೋಧಿಸುವುದು ಎಂಬ ಪ್ರಶ್ನೆ ಬುದ್ಧನಿಗೆ ಎದುರಾಗುತ್ತದೆ. ಹಿಂದೆ ಪರಿಚಿತನಾಗಿದ್ದ 'ಅಲರ ಕಲಮ್'ನಿಗೆ ಬೋಧಿಸಲು ನಿರ್ಧರಿಸುತ್ತಾನೆ. ಅವನನ್ನು ಹುಡುಕ ಹೊರಟಾಗ ಅವನು ಮೃತನಾಗಿದ್ದು ತಿಳಿದು ಬರುತ್ತದೆ. ನಂತರ 'ಉದ್ಧಕ ರಾಮಪುಟ್ಟ'ನಿಗೆ ಹುಡುಕುತ್ತಾನೆ. ಅವನೂ ಸಹ ಮೃತನಾದ ಸುದ್ದಿ ತಿಳಿಯುತ್ತದೆ. ನಂತರ ಅವನ ಕಣ್ಣು ಹೊರಳಿದ್ದು ತಮಗೆ ಹಿಂದೆ ಪರಿಚಿತರಾಗಿದ್ದ, ತಾನು ಸನ್ಯಾಸಿಯಾಗಿದ್ದಾಗ ತನ್ನ ಅವಶ್ಯಕತೆಗಳನ್ನು ನೋಡಿಕೊಂಡ ಪಂಚ ಸನ್ಯಾಸಿಗಳ ಕಡೆಗೆ. ಬುದ್ಧ ತಪಸ್ಸು ಮಾಡುವಾಗ ತಪಸ್ಸಿನಿಂದ ಕೇವಲ ಶರೀರ ಮಾತ್ರ ಕುಂದಬಲ್ಲದು, ಮೋಕ್ಷ ಸಾಧ್ಯವಿಲ್ಲವೆಂದು ಅರಿತಾಗ ಸನ್ಯಾಸತ್ವವನ್ನು ತೊರೆಯುತ್ತಾನೆ. ಈ ತೊರೆಯುವಿಕೆಯಿಂದ ಸಿಟ್ಟಿಗೆದ್ದ ಪಂಚ ಸನ್ಯಾಸಿಗಳು ಅವನನ್ನು ತೊರೆದಿರುತ್ತಾರೆ.

ಅವರನ್ನು ಹುಡುಕುತ್ತಾ ಸಾರಾನಾಥದಲ್ಲಿರುವ ಜಿಂಕೆಗಳ ವನ 'ಇಡಿಪತನ'ಕ್ಕೆ ಬರುತ್ತಾನೆ. ಅವನನ್ನು ನಿರ್ಲಕ್ಷಿಸಬೇಕೆಂಬ ತೀರ್ಮಾನ ಕೈಕೊಂಡಿದ್ದ ಆ ಸನ್ಯಾಸಿಗಳು ಅವನ ಬದಲಾದ ವ್ಯಕ್ತಿತ್ವ, ಮುಖದಲ್ಲಿನ ವರ್ಚಸ್ಸನ್ನು ಕಂಡು ಸಿಟ್ಟನ್ನು ಮರೆತು ಸ್ವಾಗತಿಸುತ್ತಾರೆ. ಇವರ ಜೊತೆಯಲ್ಲಿ ಕುಳಿತ ಬುದ್ಧ ತನ್ನ ಪ್ರಥಮ ಬೋಧನೆ ಆರಂಭಿಸುತ್ತಾನೆ. ಬುದ್ಧ ಹಿಡಿದ ದಾರಿ ಸುಖಲೋಲುಪತೆಗಾಗಲೀ, ದೇಹ ದಂಡನೆಗಾಗಲೀ ಒಲಿಯುವಂತದಲ್ಲ. ಅವನದು ಮಧ್ಯಮ ಮಾರ್ಗ. ಸುಖಲೋಲುಪತೆಗೆ ಒಲಿಯದ, ದೇಹದಂಡನೆಗೆ ಸಿಲುಕದ ಮಧ್ಯಮದ ಸಹಜ ದಾರಿಯನ್ನು ಬುದ್ಧ ಒಪ್ಪಿಕೊಂಡಿದ್ದು ಅದನ್ನೇ ತನ್ನ ಬೋಧನೆಯಲ್ಲಿ ಪ್ರತಿಪಾದಿಸಿದ. 'ನಾಳೆಯೇ ಸಾವು ಬರುವುದಾದ್ದರಿಂದ ಇಂದೇ ಕುಡಿದು, ತಿಂದು ಸಾಯೋಣ' ಎನ್ನುವುದು ಒಂದು ಅತಿರೇಕವಾದರೆ ವಾಸನೆಗಳಿಗೆ ಮೂಲವಾದ ದೇಹವನ್ನು ದಂಡಿಸುವುದು ಇನ್ನೊಂದು ಅತಿರೇಕವೆಂದೇ ಬುದ್ಧ ಸಾರಿದ. ಜೀವನದ ಅವಶ್ಯಕತೆಗಳನ್ನು ಸಂತೃಪ್ತಿಗೊಳಿಸುವುದು ಕೆಟ್ಟಕೆಲಸವಲ್ಲ. ಶರೀರವನ್ನು ಉತ್ತಮ ಸ್ಥಿತಿಯಲ್ಲಿಟ್ಟುಕೊಳ್ಳುವುದು ಪ್ರತಿಯೊಬ್ಬನ ಕರ್ತವ್ಯ ಎಂದೇ ಬುದ್ಧ ಅರಿತಿದ್ದ. ಅರಿತಿದ್ದ ಸತ್ಯವನ್ನೇ ಬೋಧಿಸಿದ. ಇದಕ್ಕೆಲ್ಲಾ ಮೂಲವಾದ ಆಲದ ಮರದಡಿಯ ನಾಲ್ಕು ವಾರಗಳ ತಪಸ್ಸಿನಾಚರಣೆ ಮತ್ತು ಅದರಿಂದ ಪಡೆದ ಜ್ಞಾನೋದಯವೇ ಕಾರಣವೆಂದು ವಿನಂತಿಸಿಕೊಂಡ. ಈ ರೀತಿ ವಿವರಿಸಿಕೊಂಡ ಅವನ ಅರಿವಿನ ದಾರಿ ಜನಸಾಮಾನ್ಯರಿಗೂ ಎಟುಕಬಲ್ಲ, ತನ್ನನ್ನು ತಾನು ಕಂಡುಕೊಳ್ಳಬಲ್ಲ ಸರಳ ಆಚರಣೆಗಳಿಂದ ಕೂಡಿತ್ತು.

ಬುದ್ಧನ ಈ ಬೋಧನೆಯ ಮಾರ್ಗವೇ ಮುಂದೆ 'ಧರ್ಮ' (ಮತ) ಎಂದು ಕರೆಸಿಕೊಂಡಿತು. ಹಾಗೆ ನೋಡಿದರೆ ಸಮಾಜದ ಒಳಿತಿಗಾಗಿ ಹೊರಟ ಸುಧಾರಕರು ಆರಿಸಿಕೊಂಡಿದ್ದು ಬೋಧನೆಯ ಮಾರ್ಗವನ್ನೇ. ಏಸುಕ್ರಿಸ್ತ ಸಾಮಿತಿಗಳ ಮೂಲಕ, ಬುದ್ಧ ಸರಳ ಸತ್ಯಗಳ ಮೂಲಕ, ಉಳಿದ ಸುಧಾರಕರು ಪ್ರವಚನಗಳ ಮೂಲಕ, ಜನ ಸಾಮಾನ್ಯರನ್ನು ತಲುಪುವ, ಅವರ ಕಷ್ಟಗಳಿಗೆ ಉತ್ತರಗಳನ್ನು ಹುಡುಕುವ ಕೆಲಸ ಮಾಡಿದರು. ಆದರೆ ಬುದ್ಧ ಎಲ್ಲಿಯೂ ತಾನೇ ದೈವವೆಂದಾಗಲಿ, ದೇವರ ಪ್ರತಿನಿಧಿಯೆಂದಾಗಲೀ ಹೇಳಿಕೊಳ್ಳಲಿಲ್ಲ. ಮುಂದಿನ ಹಂತಗಳಲ್ಲಿ ಬುದ್ಧ ನಿರಂತರವಾಗಿ ಚಲಿಸುತ್ತಾ ಊರಿಂದ ಊರಿಗೆ, ಜನರಿಂದ ಜನರಿಗೆ ಹತ್ತಿರವಾಗುತ್ತಾ ಹೋದ. ಅವನು ಹಲವಾರು ರೀತಿಯ ಸಂಕಷ್ಟದಲ್ಲಿದ್ದವರು, ಮೌಢ್ಯತೆಯಲ್ಲಿದ್ದವರನ್ನು ಕಂಡ, ಅವರಿಗೆ ಹತ್ತಿರವಾದ. ಅವರ ಸಮಸ್ಯೆಗಳಿಗೆ ಸರಳ ಬೋಧನೆಗಳಿಂದ ಬೆಳಕನ್ನು ಚೆಲ್ಲುತ್ತಾ ಹೋದ.

ಅವನು ಪ್ರಥಮವಾಗಿ ಪರಿವರ್ತಿಸಿದ್ದು 'ಮಶನ್' ಎಂಬ ಯುವಕನನ್ನು. ಶ್ರೀಮಂತ ಪುತ್ರನಾದ 'ಮಶನ್'ನನದು ತನ್ನ ಬದುಕಿನ ಕೇಂದ್ರವಾವುದು ಎಂದು ತಿಳಿಯಲಾರದ ಲೋಲುಪ್ತ ಬದುಕಾಗಿತ್ತು. ಅವನು ಸದಾ ಕಾಲ ಕುಡಿತ, ನೃತ್ಯ, ಇಂದ್ರಿಯ ಭೋಗಗಳಲ್ಲಿ ಮುಳುಗಿ ಹೋಗಿದ್ದಾನೆ. ಇಂದ್ರಿಯದಿಂದ ದೊರಕುವ ಭೋಗಗಳು ಅನುಭವಿಸಿದಷ್ಟು ಕಿಚ್ಚಿನಂತೆ ಕೆರಳುತ್ತವೆ ಎಂಬ ಮಾತಿದ್ದರೂ ಕ್ರಮೇಣ ಮಶನ್‌ಗೆ ಬದುಕಿನ ಬಗ್ಗೆ ಜುಗುಪ್ಸೆ ಮೂಡುತ್ತದೆ. ಅವನೂ ಸಹ ಬುದ್ಧನ ಹಾಗೆ ಒಂದು ರಾತ್ರಿ ಮನೆಯನ್ನು ತೊರೆದು ತನ್ನ ಸಮಸ್ಯೆಗಳಿಗೆ ಉತ್ತರಕ್ಕಾಗಿ ತಡಕಾಡಲು ಯತ್ನಿಸುತ್ತಾನೆ. ಸುತ್ತಿ ಸುತ್ತಿ ಆಯಾಸಗೊಂಡು ಒಂದೆಡೆ ಕುಳಿತು 'ನಾನೆಲ್ಲಿದ್ದೇನೆ? ಈ ದಾರಿ ಯಾವುದು? ಅಯ್ಯೋ ಇದೆಂತಹ ಸಂಕಟ' ಎಂದು ನರಳಲಾರಂಭಿಸುತ್ತಾನೆ.

ಈ ಧ್ವನಿ ಪ್ರಥಮ ಬೋಧನೆ ನೀಡಿದ್ದ, ಅದೇ ನಗರದಲ್ಲಿನ ಜಿಂಕೆಗಳ ವನ 'ಇಪಿಪತನ'ದಲ್ಲಿದ್ದ ಬುದ್ಧನಿಗೆ ಕೇಳುತ್ತದೆ. ತನ್ನೆಡೆಗೆ ನಡೆದು ಬರುವ ಆ ಯುವಕನನ್ನು ಸ್ವಾಗತಿಸುತ್ತಾನೆ. 'ಸಂಕಟವೂ ಇಲ್ಲ, ಅಪಾಯವೂ ಇಲ್ಲ. ನನ್ನೊಡನೆ ಬಾ ನಿನ್ನ ದಾರಿ ತೋರುತ್ತೇನೆ' ಎಂದು ಬುದ್ಧ ಬೆಳದಿಂಗಳಿನ ವಿಮೋಚನೆಯೆಡೆಗೆ ಅವನನ್ನು ಕರೆದೊಯ್ಯುತ್ತಾನೆ. ಹೀಗೆ ಬುದ್ಧ ಒಂದು ಕಾಲದಲ್ಲಿ ಬೆಳದಿಂಗಳಿನ ವಿಮೋಚನೆಯೆಡೆಗೆ ಅವನ್ನನ್ನು ಕರೆದೊಯ್ಯುತ್ತಾನೆ. ಹೀಗೆ ಬುದ್ಧ ಒಂದು ಕಾಲದಲ್ಲಿ ಮಾನವನ ಸಂಕಟಗಳಿಗೆ ಉತ್ತರ ಕಂಡು ಹಿಡಿಯಲು ಮನೆ ಬಿಟ್ಟು ಹೊರಟವನಾಗಿದ್ದ. ಈಗ ಅವನೇ ಸಂಕಟಗಳಿಗೆ ಉತ್ತರ ನೀಡಬಲ್ಲವನಾಗಿದ್ದ, ಉತ್ತರ ಹುಡುಕ ಹೊರಟವರಿಗೆ ನಿಲ್ದಾಣವಾಗಿ ನಿಂತಿದ್ದ. ತಾನೇ ಬೆಳದಿಂಗಳಾಗಿ ಬೆಳಕು ಚೆಲ್ಲಬಲ್ಲವನಾಗಿದ್ದ.

■ **ಅಮೃತಮತಿ**

## ಮಾತೇ ಮುತ್ತು

★ ಪುಸ್ತಕ ಓದದೆ ಪ್ರೀತಿಯನರಿತೆವು ;
ಗೆಲ್ಲದೆ ಹೆಮ್ಮೆಯ ಗಳಿಸಿದೆವು ;
ನಾವೀ ಶಾಲೆಯನೆಂದೂ ಬಿಡೆವು ;
ನೆಮ್ಮದಿಯಾಗಿಯೆ ಉಳಿಯುವೆವು

—ಕೆ.ಎಸ್.ನರಸಿಂಹಸ್ವಾಮಿ

★ ಜನಸಾಮಾನ್ಯನ
ಮೂಕ ಅಳಲಿನಲ್ಲಿ
ಸಾಮ್ರಾಜ್ಯಗಳ ಬೀಳಿಸುವ
ತಪಃಶಕ್ತಿ ಇದೆ

—ಪಿ. ಲಂಕೇಶ್

★ ಕಣ್ಣು ತುಸು ಮಲಗಿದವರನ್ನು ಹಾಗೆ
ಗೇಲಿಯಲ್ಲಿ ಎಬ್ಬಿಸಬೇಡಿ. ಅವರ ಕಂಗಳೆ ಹಾಗೆ
ಲೂಟಿಯಾದ ಪೇಟೆಯಂತೆ

—ಜಯಂತ ಕಾಯ್ಕಿಣಿ

★ ಅಗ್ಗದ ಅರಿವಿ ತಂದು
ಹಿಗ್ಗಿ ಹೊಲಿಸಿದೆ ಅಂಗಿ
ಹೆಗ್ಗಣ ಒಯ್ತುವ್ವ ತಂಗಿ ಈ ಅಂಗಿ

—ಸಂತ ಶಿಶುನಾಳ ಶರೀಫ

★ ಕತ್ತಲಿಗೆ ಹತ್ತೆ ತಲೆ? ನೂರಾರೆ? ಅದು
ಅಸಂಖ್ಯ

—ಗೋಪಾಲಕೃಷ್ಣ ಅಡಿಗ

★ ಹತ್ತು ಕೈ ಬದಲಿದರು ಮಾಸಿದರು
ಅಷ್ಟಿಷ್ಟು ಹರಿದರೂ ಅದೇ ಬೆಲೆ
ಕರೆನ್ಸಿನೋಟು ಕಲೆ.

—ಕೆ.ಎಸ್.ನಿಸಾರ್ ಅಹಮದ್

★ ಕಾಯದ ಮೊದಲಿಂಗೆ
ಬೀಜವಾವುದೆಂದರಿಯದೀ ಲೋಕ.

—ಅಲ್ಲಮಪ್ರಭು